# ಮಣ್ಣಿನ ಮಡಿಕೆಯಲ್ಲಿ ಬಣ್ಣಗಳ ಚಿತ್ತಾರ!

**ಮಣ್ಣಿನ ಮಡಿಕೆಯಲ್ಲಿ ಬಣ್ಣ ಬಣ್ಣದ ಚಿತ್ತಾರ ಲಾಸ್ಯವಾಡುವುದು ನೋಡುವುದೇ ಕಣ್ಣಿಗೆ ಹಬ್ಬ. ಸುರತ್ಕಲ್ ಸಮೀಪದ ಹಳೆ ಅಂಗಡಿಯ ರಂಜನಾ ವಿವಿಧ ರೀತಿಯ ಮಡಿಕೆಯ ಮೇಲೆ ಅಂದದ ಪೈಂಟಿಂಗ್ ಮಾಡಿ ಗಮನಸೆಳೆದಿದ್ದಾರೆ.**

■ **ಚಿತ್ರ-ಬರಹ: ವಿ.ಎಸ್. ನಾಯಕ, ಬಳಕೂರು**



ಕಲೆ ಸೃಜನಶೀಲತೆಯ ಅಭಿವ್ಯಕ್ತಿ. ಕಲಾವಿದ/ದೆ ತನ್ನ ಕ್ರಿಯಾತ್ಮಕತೆಯನ್ನು ಒರೆಗೆ ಹಚ್ಚಿದಾಗ ಸುಂದರ, ಆಕರ್ಷಕ ಕಲಾಕೃತಿ ಪಡಿಮೂಡುತ್ತದೆ. ಚಿತ್ರಕಲೆ, ಕಸದಿಂದ ಕಲೆ, ಪ್ಲಾಸ್ಟಿಕ್, ನಿರುಪಯುಕ್ತ ವಸ್ತುಗಳಿಂದ ಕಲಾಕೃತಿ, ವೈರ್‌ಗಳಿಂದ ಮಾಡುವ ಕಲಾಕೃತಿಗಳ ಜತೆಗೆ ಮಡಿಕೆ, ಪಾತ್ರೆಗಳ ಮೇಲೆ ಮಾಡುವ ಪೈಂಟಿಂಗ್ ಕೂಡ ಕಲಾವಿದನ ಸೃಜನಶೀಲ ಮನಸ್ಸು ಮತ್ತು ಕಲೆಗಾರಿಕೆಗೆ ಸಾಕ್ಷಿಯಾಗುತ್ತದೆ.

ಮಣ್ಣಿನ ಮಡಿಕೆ ಮೇಲೆ ಸುಂದರ ಕಲಾಕೃತಿಗಳು ಅರಳಿದಾಗ ಅದು ನೋಡುಗರನ್ನು ಥಟ್ಟನೆ ಸೆಳೆಯುತ್ತದೆ. ಸಾಲು ಸಾಲಾಗಿ ಜೋಡಿಸಿಟ್ಟಂತೆ ಕಾಣುವ ಮಣ್ಣಿನ ಮಡಿಕೆಗಳು. ಅವುಗಳ ಅಂದ ಹೆಚ್ಚಿಸಲು ಅತ್ಯಾಕರ್ಷಕವಾಗಿ ಬಿಡಿಸಿದ ಬಣ್ಣಬಣ್ಣದ ಹೂಬಳ್ಳಿಗಳು. ವಿವಿಧ ಬಣ್ಣಗಳಲ್ಲಿ ಕಂಗೊಳಿಸುವ ಹಸಿರು ಗುಲಾಬಿ, ಕೆಂಪು ಬಣ್ಣದ ನೆರಳು ಬೆಳಕಿನ ಆಟದಂತೆ ಗೋಚರಿಸುವ ಚಿತ್ತಾರಗಳು.. ಹೀಗೆ ಒಮ್ಮೆ ನೋಡಿದರೆ ಮತ್ತೊಮ್ಮೆ, ಮಗದೊಮ್ಮೆ ನೋಡಬೇಕೆನಿಸುವ ಕಲಾತ್ಮಕ ಕಲೆ, ಅದರ ಸೊಬಗು ಸೌಂದರ್ಯ ನೋಡಿ ಬೆರಗಾಗದವರಿಲ್ಲ.



ರಂಜನಾ ದುರ್ಗೇಶ್ ಶೆಟ್ಟಿಗಾರ್